ಸಿಸಿ ನಂಃ 1/18

ಪಿಡಬ್ಲ್ಯು: 1

**ಸಾಕ್ಷಿಗೆ ಇಂದು ದಿನಾಂಕಃ 25-01-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ SNP ಆರೋಪಿ ಪರ ವಕೀಲರಿಂದ**

1. ನಾನು ನೂಲು ಮತ್ತು ಸೀರೆ ವ್ಯಾಪಾರ ಮಾಡುತ್ತೇನೆ. ನೂಲು ಮತ್ತು ಸೀರೆ ವ್ಯಾಪಾರ ಒಂದೇ ಎಂದರೆ ಸರಿ. ನಾನು ಹಲಗೇಕರ textiles ನ ಏಕ ಮಾಲೀಕತ್ವದ ಸಂಸ್ಥೆಯನ್ನು ನಡೆಸುತ್ತೇನೆ. ವಾರ್ಷಿಕ ವ್ಯಾಪಾರ ಸುಮಾರು 5 ಕೋಟಿವರೆಗೆ ಆಗುತ್ತದೆ. ಸುಮಾರು 50 ಲಕ್ಷದ ವರೆಗೆ ನಾನು ವಾರ್ಷಿಕ ಆದಾಯ ಗಳಿಸುತ್ತೇನೆ. ಪ್ರತಿವರ್ಷ ನಾನು ಸಂಸ್ಥೆಯ ಆದಾಯ ತೆರಿಗೆ ತುಂಬುತ್ತೇನೆ. ನಾನು ನನ್ನ ವೈಯಕ್ತಿಕ ಆದಾಯದ ಮೇಲೆಯೂ ಸಹ ನಾನು ಆದಾಯ ತೆರಿಗೆ ತುಂಬುತ್ತೇನೆ. ಆದಾಯ ತೆರಿಗೆ ದಾಖಲೆಗಳಲ್ಲಿ ನನಗೆ ಬರುವ ಮತ್ತು ನಾನು ಕೊಡುವ ಹಣದ ವ್ಯವಹಾರದ ವಿವರವನ್ನು ತೋರಿಸುತ್ತೇನೆ. ನನ್ನ ವೈಯಕ್ತಿಕವಾಗಲೀ ಮತ್ತು ನನ್ನ ಸಂಸ್ಥೆಗೆ ಸಂಬಂದಪಟ್ಟ ಹಾಗೇ ಆಗಲೀ ಆದಾಯ ಮತ್ತು ಖರ್ಚು ಹಾಗೂ ನಾನು ಕೊಡಬೇಕಾದ ಹಣ ಮತ್ತು ನನಗೆ ಬರಬೇಕಾದ ಹಣದ ವಿವರವನ್ನು ಖಾತೆಯ ವಿವರವನ್ನು ನಿರ್ವಹಣೆ ಮಾಡುತ್ತೇನೆ. 25,000/- ರೂ ಕ್ಕಿಂತ ಹೆಚ್ಚಿಗೆ ಹಣದ ವ್ಯವಹಾರವನ್ನು ಚೆಕ್ ಮುಖಾಂತರ ಮಾಡಬೇಕೆಂದರೆ ಹಾಗೇನು ಇಲ್ಲ.

2. ನಾನು ಆರೋಪಿಗೆ 10 ಲಕ್ಷ ರೂ'ಗಳನ್ನು ಕೈಗಡ ಸಾಲವಾಗಿ ಕೊಟ್ಟಿದ್ದೆನು. ಆರ್ಥಿಕವಾಗಿ ನನಗೆ ತೊಂದರೆ ಇದೆ ಎಂದು ಆರೋಪಿ ನನ್ನಲ್ಲಿ ಕೇಳಿದ್ದರಿಂದ ನಾನು ಸಾಲ ಕೊಟ್ಟಿದ್ದೇನೆ. ನಾನು ಆರೋಪಿಗೆ ಒಂದೇ ದಿನಾಂಕದಂದು 10 ಲಕ್ಷ ರೂ'ಗಳನ್ನು ಕೊಟ್ಟಿದ್ದೆನು. ನಾನು ಆರೋಪಿಗೆ ಮೇ 2013 ರಲ್ಲಿ ಹಣ ಕೊಟ್ಟಿದ್ದೆನು, ಆದರೆ ನಿಖರವಾಗಿ ದಿನಾಂಕ ನನಗೆ ನೆನಪಿಲ್ಲ. 10 ಲಕ್ಷ ರೂ ದೊಡ್ಡ ಹಣ ಎಂದರೆ ಸರಿ. ನಾನು ವಕೀಲರಿಗೆ ಮಾಹಿತಿ ಕೊಡಬೇಕಾದರೆ ಯಾವ ದಿನಾಂಕದಂದು ಆರೋಪಿಗೆ ಹಣ ಕೊಟ್ಟಿದ್ದೆನು ಎಂಬ ವಿಷಯವನ್ನು ಹೇಳಿದ್ದೆನು. ಫಿರ್ಯಾದಿಯಲ್ಲಿ ಮತ್ತು ವಕೀಲರು ನೀಡಿದ ನೋಟೀಸ್ ನಲ್ಲಿ ಯಾವ ದಿನಾಂಕದಂದು ಆರೋಪಿಗೆ ಸಾಲ ಕೊಡಲಾಗಿತ್ತು ಎಂದು ಬರೆದಿಲ್ಲ ಎಂದರೆ ಸರಿ. ನಾನು ಮೇ 2013 ರಲ್ಲಿ ಆರೋಪಿಗೆ ಸಾಲ ಕೊಟ್ಟಿದ್ದ ವಿಷಯವನ್ನು ತಿಳಿಸಿದ್ದೆನು. ನಿಪಿ-3 ರಲ್ಲಿ ಮೇ 2013 ರಂದು ನಾನು ಆರೋಪಿಗೆ ಸಾಲ ಕೊಟ್ಟ ವಿಷಯ ಉಲ್ಲೇಖ ಇಲ್ಲ ಎಂದರೆ ಸರಿ. ನಾನು 10 ಲಕ್ಷ ರೂ ಅನ್ನು ನನ್ನ ದೈನಂದಿನ ವ್ಯವಹಾರದಿಂದ ಬಂದ ಹಣದಿಂದ ಕೊಟ್ಟಿದ್ದೆನು. ಚೆಕ್ ಮುಖಾಂತರ ಆರೋಪಿಗೆ ಹಣ ಕೊಡಲು ನನಗೆ ತೊಂದರೆ ಇರಲಿಲ್ಲ. ಹಲಗೇಕರ

textiles ನ ಪ್ರತಿ ದಿನದ ವ್ಯವಹಾರವನ್ನು ಪ್ರತ್ಯೇಕವಾಗಿ ಲೆಕ್ಕದ ಪುಸ್ತಕ ಬರೆಯಲಾಗುತ್ತದೆ. ಪ್ರತಿ ದಿನ ಲೆಕ್ಕದ ಪುಸ್ತಕದಲ್ಲಿ ವ್ಯಾಪಾರದಿಂದ ಬಂದ ಹಣ ಮತ್ತು ಖರ್ಚಿನ ಹಣ ಬರೆಯಲಾಗುತ್ತದೆ. ಆರೋಪಿಗೆ ಹಣ ಕೊಟ್ಟ ದಿನಾಂಕದಂದು ಆರೋಪಿಗೆ ಹಣ ಕೊಟ್ಟ ಬಗ್ಗೆ ಲೆಕ್ಕದ ಪುಸ್ತಕದಲ್ಲಿ ವಿವರಣೆ ಇದೆ. ಹಲಗೇಕರ textiles ನ ವ್ಯವಹಾರಗಳನ್ನು account book ಗಳಲ್ಲಿ ಬರೆಯುತ್ತೇವೆ. Account Book ಹಾಜರು ಮಾಡಲು ತೊಂದರೆ ಇಲ್ಲ.

3. ಮಹಾರಾಷ್ಟ್ರದ ಚಂದಗಢ ತಾಲೂಕಿನಲ್ಲಿ ಶಿನೊಳ್ಳಿ ಎಂಬ ಹಳ್ಳಿ ಇದೆ ಎಂದರೆ ಸರಿ. ಬೆಳಗಾವಿಯಿಂದ ಅದು 10-12 ಕಿಲೋ ಮೀಟರ್ ದೂರ ಇದೆ. ಶಿನೊಳ್ಳಿ ಕೈಗಾರಿಕಾ ಪ್ರದೇಶ ಎಂದರೆ ಸರಿ. ಅಲ್ಲಿ ಸಾಕಷ್ಟು ಕೈಗಾರಿಕೆಗಳು ಮತ್ತು ಉದ್ಯಮದ ಸಂಸ್ಥೆಗಳು ಇವೆ ಎಂದರೆ ಸರಿ. ಹೊರ ದೇಶದಿಂದ ಸಹ ಅಲ್ಲಿ ಹೂಡಿಕೆ ಮಾಡಿದ ಕಂಪನಿಗಳು ಇವೆ ಎಂದರೆ ಸರಿ. ಶಿನೊಳ್ಳಿ ಗ್ರಾಮ ಬೆಳಗಾವಿ ಸಾವಂತವಾಡಿ ರಸ್ತೆಯಲ್ಲಿ ಇದೆ ಎಂದರೆ ಸರಿ. ಶಿನೊಳ್ಳಿಯಲ್ಲಿ 3 Petrol Bunk ಇದೆ ಎಂದರೆ ಸರಿ. ಶಿನೊಳ್ಳಿ ಗ್ರಾಮದಲ್ಲಿನ SR Petrol Bunk ಮೊದಲು ಆರೋಪಿಗೆ ಮಂಜೂರಾಗಿತ್ತು. ತದನಂತರದಲ್ಲಿ ಆತನ ಸಹೋದರ ನಡೆಸುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಶಿನೊಳ್ಳಿಯಿಂದ 3 ಕಿಲೋಮೀಟರ್ ದೂರದಲ್ಲಿ ಇರುವ ಸೂಪೆ ಎಂಬ ಗ್ರಾಮದಲ್ಲಿ ಆರೋಪಿಗೆ ಸಂಬಂಧಿಸಿದ HP Petrol Bunk ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಹೆಸರಿನಲ್ಲಿ 3 ಕಮರ್ಷಿಯಲ್ complex ಇವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಹೆಸರಿನಲ್ಲಿ 3 ಮನೆಗಳು ಇವೆ ಅವುಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಶಿನೊಳ್ಳಿಯಲ್ಲಿ ತನ್ನ ತಂದೆ ತಾಯಿ ಮತ್ತು ಸಹೋದರರೊಂದಿಗೆ ಸ್ವಂತ ಮನೆಯಲ್ಲಿ ವಾಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಮುಂದುವರೆದು ಆರೋಪಿ ವಿಜಯನಗರ ಬೆಳಗಾವಿಯಲ್ಲಿ ವಾಸ ಮಾಡುತ್ತಾನೆ. ಆರೋಪಿ ವಿಜಯನಗರ ಬೆಳಗಾವಿಯಲ್ಲಿ ವಾಸ ವಾಡುತ್ತಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಆರೋಪಿ ಶಿನೊಳ್ಳಿ ಗ್ರಾಮದಲ್ಲಿ ವಾಸ ಇದ್ದು ಆತನಿಗೆ ಸಂಬಂಧಿಸಿದ ಚರ ಆಸ್ತಿಗಳು ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಆಸ್ತಿಗಳು ಶಿನೊಳ್ಳಿಯಲ್ಲಿ ಇವೆ ಎಂದರೆ ಸುಳ್ಳು. ಆರೋಪಿಗೆ ಸಂಬಂಧಿಸಿದ Aadhar card, Pan card, Ration card ಶಿನೊಳ್ಳಿ ವಿಳಾಸದಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ.

4. ನಾನು ಶಿನೊಳ್ಳಿ ಗ್ರಾಮದ ಸರ್ವೇ ನಂಬರ್ 91/1A ಗೆ ಸಂಬಂಧಿಸಿದ ಆಸ್ಥಿಯನ್ನು ನಾನು ಮತ್ತು ನನ್ನ ಕುಟುಂಬಸ್ಥರು ಸೇರಿ ಆರೋಪಿಗೆ 2 ಪ್ರತ್ಯೇಕ ಖರೀದಿ ಪತ್ರ 01-07-2013 ರ ಪ್ರಕಾರ ಖರೀದಿ ಕೊಟ್ಟಿದ್ದೆವು ಎಂದರೆ ಸರಿ. ಸದರಿ ಆಸ್ಥಿಯಲ್ಲಿ ನಮ್ಮ ವ್ಯವಹಾರದ ಸಣ್ಣ ಸಣ್ಣ ಯೂನಿಟ್ ಗಳು ಇದ್ದವು. ಅವುಗಳನ್ನು ಸೇರಿಸಿ ಆರೋಪಿಗೆ ಮಾರಾಟ ಮಾಡಲಾಗಿತ್ತು ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ಸದರಿ ಆಸ್ಥಿಗಳನ್ನು 52 ಲಕ್ಷಕ್ಕೆ ಮಾರಾಟ

ಮಾಡಲಾಗಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ನಮ್ಮ ಕುಟುಂಬದ ಅಡಚಣೆಗಾಗಿ ಮಾರಾಟ ಮಾಡಲಾಗಿತ್ತು ಎಂದರೆ ಸುಳ್ಳು.

5. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಲ್ಲಿ ಆರೋಪಿಗೆ ಕಳುಹಿಸಿದ ನೋಟೀಸ್ Not Claimed ಆದ ಬಗ್ಗೆ ದಾಖಲೆಯನ್ನು ಹಾಜರು ಮಾಡಿಲ್ಲ. ನೋಟೀಸ್ ಜಾರಿ ಆದ ಬಗ್ಗೆ ಅಂಚೆ ಕಚೇರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ನ್ಯಾಯಾಲಯದಿಂದ ಆರೋಪಿಯ ವಿಜಯನಗರ ವಿಳಾಸಕ್ಕೆ ಸಾಕಷ್ಟು ಬಾರಿ ಸಮನ್ಸ್ ಕೊಟ್ಟರೂ ಸಹ ಜಾರಿ ಆಗಿಲ್ಲ ಎಂದರೆ ಸರಿ. ಸದನಂತರ ನನ್ನ ವಕೀಲರು ನ್ಯಾಯಾಲಯದ ಮುಖಾಂತರ ಪ್ರಭಾಕರ ಎಮ್ ಕಾಂಡೇಕರ್ , ಕಾಂಡೇಕರ್ traders, ಬೆಳಗಾವಿ , ವೆಂಗುರ್ಲಾ ರೋಡ್, ಶಿನೊಳ್ಳಿ ಪಾಟಾ ತಾಲೂಕ ಚಂದಗಡ, district ಕೊಲ್ಲಾಪುರ ಜಿಲ್ಲೆ ಎಂದು ಸಮನ್ಸ ಕಳುಹಿಸಿದ ನಂತರ ಆರೋಪಿಗೆ ಸಮನ್ಸ ಜಾರಿ ಆಗಿದೆ ಎಂದರೆ ಸರಿ. ಸಾಕ್ಷಿಮುಂದುವರೆದು ಆರೋಪಿಯ ಮನೆವಿಳಾಸ ಬೆಳಗಾವಿಯ ವಿಜಯನಗರದಲ್ಲಿ ಇದ್ದು ಮೇಲೆ ಹೇಳಿದ ವಿಳಾಸ ಆರೋಪಿಯ ಅಂಗಡಿಯ ವಿಳಾಸ ಇರುತ್ತದೆ. ಸಾಕ್ಷಿಯು ನೋಡಿ ಗುರ್ತಿಸಿದಂತಹ ಅಂಚೆ ಕವರ್ ಅನ್ನು ನಿಡಿ-1 ಎಂದು ಗುರ್ತಿಸಲಾಯಿತು.

**ಫಿರ್ಯಾದಿದಾರನ ಪರವಾಗಿ ಶ್ರೀ DAA ವಕೀಲರಿಂದ**

ಮರು ವಿಚಾರಣೆಃ ಏನು ಇಲ್ಲಾ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ**

**5 ನೇ ಪ್ರ.ದ.ನ್ಯಾ.ದಂ. ಗಳು, ಬೆಳಗಾವಿ**